## ನಿಮ್ಮೊಡನೆ

# ಸರ್ಕಾರಿ ಶಾಲೆಗಳಿಗೆ ತಗುಲಿರುವ ಸೋಂಕು ನಿವಾರಣೆಯಾಗುವುದು ಬೇಡವೆ?

**ಸರ್ಕಾರಿ ಶಾಲೆಗಳ ಶಿಥಿಲೀಕರಣವನ್ನು ಸರ್ಕಾರ ಕಾಲಸಹಜ ಪ್ರಕ್ರಿಯೆ ಎಂದು ಭಾವಿಸಿದಂತಿದೆ. ಕೊರೊನಾ ಸೋಂಕಿನಿಂದ ರಕ್ಷಿಸಿಕೊಳ್ಳುವ ಹೊಣೆಯನ್ನು ಜನರ ಹೆಗಲಿಗೇ ವರ್ಗಾಯಿಸಿ ಕೈತೊಳೆದುಕೊಂಡಂತೆ, ಸರ್ಕಾರಿ ಶಾಲೆಗಳನ್ನು ಕೂಡ ಸರ್ಕಾರ ಕೈಬಿಟ್ಟಿದೆ.**

ಕೊರೊನಾ ಕಾರಣದಿಂದಾಗಿ ಉಲ್ಬಣಗೊಂಡಿರುವ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಸ್ಥಳೀಯ ಕೈಗಾರಿಕೆಗಳನ್ನು ಬಲಪಡಿಸುವ ಹಾಗೂ ದೇಸಿ ಉತ್ಪನ್ನಗಳ ಬಳಕೆಯನ್ನು ಉತ್ತೇಜಿಸುವ ಮಾತುಗಳನ್ನು ಕೇಂದ್ರ ಸರ್ಕಾರ ಆಡುತ್ತಿದೆ. ಜಾಗತೀಕರಣದ ಸಂದರ್ಭದಲ್ಲಿ ಸ್ಥಳೀಯ ಹಾಗೂ ಜಾಗತಿಕ ಎನ್ನುವ ಪರಿಕಲ್ಪನೆಗಳ ನಡುವಿನ ಗೆರೆಯೇ ತೀರಾ ತೆಳುವಾಗಿರುವಾಗ ಸ್ಥಳೀಯ ಸ್ವಾವಲಂಬನೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆನ್ನುವುದನ್ನು ಕಾಲವೇ ಸ್ಪಷ್ಟಪಡಿಸಬೇಕು. ಆದರೆ, ಇಂಥ ಚಿಂತನೆ–ಪ್ರಯತ್ನಗಳು ದೇಸಿ ಉದ್ಯಮಗಳನ್ನು ಜೀವಂತವಾಗಿಡುವ ದೃಷ್ಟಿಯಿಂದ ಆಗಾಗ ನಡೆಯುವುದು ಅಗತ್ಯ. ದುರದೃಷ್ಟವಶಾತ್, ಇಂಥ ಯಾವ ಯೋಚನೆಗಳೂ ನಮ್ಮ ಸರ್ಕಾರಿ ಶಾಲೆಗಳ ಸಬಲೀಕರಣದ ನಿಟ್ಟಿನಲ್ಲಿ ನಡೆಯುತ್ತಿಲ್ಲ.


ಶಾಲಾ ಕಾಲೇಜುಗಳಲ್ಲಿನ ಕಲಿಕೆಯ ವಿಧಾನದ ಬದಲಾವಣೆಯ ಬಗ್ಗೆ ಕೊರೊನಾ ಕಾರಣದಿಂದಲಾದರೂ ಚರ್ಚೆಗಳು ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ, ಈ ಚರ್ಚೆಯಲ್ಲಿ ಸರ್ಕಾರಿ ಶಾಲೆಗಳಿಗೆ ಆದ್ಯತೆಯೇ ದೊರೆಯುತ್ತಿಲ್ಲ. ಆನ್‌ಲೈನ್ ಕಲಿಕೆಗೆ ಅವಕಾಶ ಇರಬೇಕೇ ಬೇಡವೇ ಎನ್ನುವುದು ಚರ್ಚೆಯ ಪ್ರಮುಖ ವಿಷಯವಾಗಿದೆ. ಖಾಸಗಿ ಶಾಲೆಗಳು ಶುಲ್ಕದಲ್ಲಿ ವಿನಾಯತಿ ಕೊಡಬೇಕೆಂದು ಪೋಷಕರು ದನಿ ಎತ್ತುತ್ತಿದ್ದಾರೆ. ಸರ್ಕಾರ ಕೂಡ ಆನ್‌ಲೈನ್ ಶಿಕ್ಷಣದ ಔಚಿತ್ಯ ಹಾಗೂ ಖಾಸಗಿ ಶಾಲೆಗಳ ಶುಲ್ಕದಾಹದ ಬಗ್ಗೆ ತಲೆಕೆಡಿಸಿಕೊಂಡಿದೆ. ಮೇಲ್ನೋಟಕ್ಕೆ ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಯ ಪ್ರಯತ್ನಗಳಾಗಿ ಈ ಮಾತುಕತೆಗಳು ಕಾಣಿಸುತ್ತಿವೆಯಾದರೂ, ಅವುಗಳ ಅಂತರಂಗದಲ್ಲಿರುವುದು ಈವರೆಗೆ ಚಾಲ್ತಿಯಲ್ಲಿರುವ ಅಸಮಾನ ಶಿಕ್ಷಣ ವ್ಯವಸ್ಥೆಯ ಮುಂದುವರಿಕೆಯೇ ಆಗಿದೆ.

ಖಾಸಗಿ ಮತ್ತು ಸರ್ಕಾರಿ ಎನ್ನುವ ಶಿಕ್ಷಣ ಕ್ಷೇತ್ರದಲ್ಲಿರುವ ವರ್ಗೀಕರಣ, ಸಮಾಜದಲ್ಲಿನ ಆರ್ಥಿಕ ಶ್ರೇಣಿಗಳ ಪ್ರತಿಬಿಂಬಗಳೂ ಹೌದು. ಆರ್ಥಿಕವಾಗಿ ಸಶಕ್ತವಾದ ವರ್ಗದ ಮಕ್ಕಳು ಖಾಸಗಿ ಶಾಲೆಗಳನ್ನು ಆಯ್ದುಕೊಂಡರೆ, ದುರ್ಬಲ ವರ್ಗದ ಮಕ್ಕಳು ಸರ್ಕಾರಿ ಶಾಲೆಗಳನ್ನು ಅವಲಂಬಿಸುತ್ತಿರುವುದು ಸದ್ಯದ ಸ್ಥಿತಿ. ಮಕ್ಕಳ ನಡುವೆ ತಾರತಮ್ಯವನ್ನು ಸೃಷ್ಟಿಸುವ ಈ ಶಿಕ್ಷಣ ವ್ಯವಸ್ಥೆಯನ್ನು ಕೊನೆಗೊಳಿಸಿ, ಸಮಾನ ಶಿಕ್ಷಣ ಪದ್ಧತಿಯನ್ನು ರೂಪಿಸಬೇಕೆಂದು ಶಿಕ್ಷಣ ತಜ್ಞರು ಆಗಾಗ ಒತ್ತಾಯಿಸುತ್ತಲೇ ಇದ್ದಾರೆ. ಆದರೆ, ಶಿಕ್ಷಣವೆನ್ನುವುದು ಉದ್ಯಮದ ಸ್ವರೂಪ ಪಡೆದುಕೊಂಡಿರುವಾಗ ಸಮಾನ ಶಿಕ್ಷಣದ ಪರಿಕಲ್ಪನೆ ಕಾರ್ಯರೂಪಕ್ಕೆ ಬರುವುದು ಅಷ್ಟು ಸುಲಭವಲ್ಲ. ಸರ್ಕಾರಿ ಶಾಲೆಗಳು ಶಿಥಿಲವಾದಷ್ಟೂ ಶಿಕ್ಷಣೋದ್ಯಮಕ್ಕೆ ಹಿಗ್ಗು. ಜನಸಾಮಾನ್ಯರು ಕೂಡ ಮಕ್ಕಳ ಶಿಕ್ಷಣಕ್ಕಾಗಿ ತಮ್ಮೆಲ್ಲ ಗಳಿಕೆಯನ್ನು ಸುರಿಯಲು ಸಿದ್ಧವಾಗಿರುವಾಗ, ಅಸಮಾನ ಶಿಕ್ಷಣ ವ್ಯವಸ್ಥೆಯನ್ನು ಸರ್ಕಾರ ಕೂಡ ಪೋಷಿಸುತ್ತಿದೆ. ಸರ್ಕಾರಿ ಶಾಲೆಗಳು ಶಿಥಿಲಗೊಂಡಷ್ಟೂ ಶಿಕ್ಷಣೋದ್ಯಮಕ್ಕೆ ಹಿಗ್ಗು. ಈ ಶಿಥಿಲೀಕರಣವನ್ನು ಸರ್ಕಾರ ಕೂಡ ಕಾಲಸಹಜ ಪ್ರಕ್ರಿಯೆ ಎಂದು ಭಾವಿಸಿದಂತಿದೆ. ಕೊರೊನಾ ಸೋಂಕಿನಿಂದ ರಕ್ಷಿಸಿಕೊಳ್ಳುವ ಹೊಣೆಯನ್ನು ಜನರ ಹೆಗಲಿಗೇ ವರ್ಗಾಯಿಸಿ ಕೈತೊಳೆದುಕೊಂಡಂತೆ, ಸರ್ಕಾರಿ ಶಾಲೆಗಳನ್ನು ಕೂಡ ಸರ್ಕಾರ ಕೈಬಿಟ್ಟಿದೆ. ಇದಕ್ಕೆ ನಿದರ್ಶನವೆನ್ನುವಂತೆ, ಕೊರೊನಾ ಸಂದರ್ಭದಲ್ಲಿ ನಡೆಯುತ್ತಿರುವ ಶೈಕ್ಷಣಿಕ ಚರ್ಚೆಗಳನ್ನು ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಬಳಸಿಕೊಳ್ಳುವ ಸಾಧ್ಯತೆಗೆ ಸರ್ಕಾರ ಪ್ರಯತ್ನಿಸುತ್ತಲೇ ಇಲ್ಲ. ಖಾಸಗಿ ಶಾಲೆಗಳ ದುಬಾರಿಶುಲ್ಕಕ್ಕೆ ಪರ್ಯಾಯವಾಗಿ ಸರ್ಕಾರಿ ಶಾಲೆಗಳತ್ತ ಸಾರ್ವಜನಿಕರ ಗಮನವನ್ನು ಸೆಳೆಯುವ ಯಾವ ಪ್ರಯತ್ನವನ್ನೂ ಸರ್ಕಾರ ಮಾಡಿದಂತಿಲ್ಲ. ಮೂಲಭೂತ ಅಗತ್ಯಗಳನ್ನು ಉತ್ತಮಗೊಳಿಸಿ, ಬೋಧನೆಯ ಗುಣಮಟ್ಟವನ್ನು ಉತ್ತಮಗೊಳಿಸಿದರೆ ಸರ್ಕಾರಿ ಶಾಲೆಗಳು ಮಕ್ಕಳಿಂದ ನಳನಳಿಸತೊಡಗುತ್ತವೆ. ಆದರೆ, ಹಾಗಾಗುವುದು ಸರ್ಕಾರಕ್ಕೇ ಬೇಕಾದಂತಿಲ್ಲ.

ಸರ್ಕಾರಿ ಶಾಲೆಗಳ ಬಹುದೊಡ್ಡ ಶಕ್ತಿ ವೃತ್ತಿಪರ ಶಿಕ್ಷಕರು. ಅವರ ಪ್ರತಿಭೆಯನ್ನು ಸರ್ಕಾರ ಶಿಕ್ಷಣೇತರ ವಿಷಯಗಳಿಗೆ ಬಳಸಿಕೊಳ್ಳುತ್ತಿರುವುದೇ ಹೆಚ್ಚು. ಶಿಕ್ಷಣ ಇಲಾಖೆಯ ಅಧಿಕಾರಿಗಳ ಜೊತೆಗೆ ಸ್ಥಳೀಯ ಪೌರಾಡಳಿತ ಸಂಸ್ಥೆಗಳ ಅಧಿಕಾರಿಗಳು ಕೂಡ ಸಮಯ ಸಿಕ್ಕಾಗಲೆಲ್ಲ ಶಿಕ್ಷಕರ ಜುಟ್ಟು ಹಿಡಿದುಕೊಳ್ಳಲು ಹಿಂಜರಿಯುವುದಿಲ್ಲ. ಕೊರೊನಾ ಕಾರಣದಿಂದಾಗಿ ಇಡೀ ದೇಶವೇ ಲಾಕ್‌ಡೌನ್ ಆಗಿದ್ದ ಸಂದರ್ಭದಲ್ಲಿ ಮನೆ ಮನೆ ಸಮೀಕ್ಷೆ ಮಾಡಲು ಸರ್ಕಾರಕ್ಕೆ ದೊರೆತದ್ದು ಶಿಕ್ಷಕವೃಂದ. ಈಗ ಮಕ್ಕಳು ಮನೆಯಲ್ಲಿರುವ ಸಂದರ್ಭದಲ್ಲೂ ಶಿಕ್ಷಕರನ್ನು ಶಾಲೆಗಳಲ್ಲಿ ಕೂರಿಸಿಕೊಳ್ಳಲಾಗುತ್ತಿದೆ. ಮನೆಯಲ್ಲಿದ್ದುಕೊಂಡೇ ಶಿಕ್ಷಕರನ್ನು ಸಾಮರ್ಥ್ಯವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸುವ ಬದಲು, ಮಕ್ಕಳಿಲ್ಲದ ಶಾಲೆಯಲ್ಲಿ ಅವರ ದೈಹಿಕ ಹಾಜರಾತಿಯನ್ನು ಅಪೇಕ್ಷಿಸಲಾಗುತ್ತಿದೆ.

ನಮ್ಮ ಈವರೆಗಿನ ಜೀವನಪದ್ಧತಿ ಹಾಗೂ ಆಲೋಚನಾಕ್ರಮಗಳ ಮರು ಪರಿಶೀಲನೆಗೆ ಕೊರೊನಾ ಕಾರಣವಾಗಿದೆ. ಆದರೆ, ನಾಳೆಗಳ ನಿರ್ಣಾಯಕಶಕ್ತಿಯಾದ ಶಿಕ್ಷಣ ವ್ಯವಸ್ಥೆಯನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಮಾತ್ರ ನಮ್ಮ ಯೋಚನೆಗಳು ಬದಲಾವಣೆಗೆ ಮುಕ್ತವಾಗಿಲ್ಲ. ಮೌಲ್ಯಗಳನ್ನು ಬದಿಗಿಟ್ಟು ಜನಪ್ರಿಯ ಪರಿಕಲ್ಪನೆಗಳ ಸುತ್ತಲೇ ಗಿರಕಿಹೊಡೆಯುವ ಚರ್ಚೆಗಳಿಂದ ಸಮಾಜಕ್ಕೆ ಉಪಯೋಗವಿಲ್ಲ.

**ರಘುನಾಥ ಚ.ಹ.**



ಈಶ್ವರ್